# ಮಿಂಚುಹುಳು

■ ಡಾ. ಕೆ.ಬಿ. ರಂಗಸ್ವಾಮಿ
ಕಲೆ: ಸಂತೋಷ್ ಸಸಿಹಿತ್ಲು



ಮಿಣಕ್ ಮಿಣಕ್ ಮಿಣಕ್ ಎಂದು
ಮಿನುಗುತಿರುವ ಮಿಂಚುಹುಳುವೇ
ಇರುಳಿನಲ್ಲೇ ಏಕೆ ನೀನು
ನನ್ನ ಸುತ್ತ ಸುಳಿಯುವೆ?

ನೋಡಲೆನಿತು ಸೊಗಸು ನಿನ್ನ
ಹೊಳೆವ ಅಂದ ಚಂದವ
ಬೆಂಕಿಯುಂಡೆ ಉಗುಳಿದಂತೆ
ಮಿಂಚುತಿರುವ ಮಾಟವ

ಕೈಯ ಮುಂದೆ ಚಾಚಿದೊಡನೆ
ಹಿಡಿಯಲೆಂದು ನಿನ್ನ ನಾನು
ಪುಳಕ್ ಪುಳಕ್ ಪುಳಕ್ ಎಂದು
ನುಣುಚಿಕೊಳುವ ಜಾಣೆ ನೀನು

ಗವ್ವೆನ್ನುವ ಕತ್ತಲು ಕವಿದು
ನಡೆವ ಹಾದಿ ಮಸುಕಾಗಲು
ದಾರಿದೀಪವಾಗಿ ನೀನು
ಬರುವೆ ನನ್ನ ಮುನ್ನಡೆಸಲು

ಮಿಣಕ್ ಮಿಣಕ್ ಮಿಣಕ್ ಎಂದು
ಮಿನುಗುತಿರುವ ಮಿಂಚುಹುಳುವೇ
ಇರುಳಿನಲ್ಲೇ ಏಕೆ ನೀನು
ನನ್ನ ಸುತ್ತ ಸುಳಿಯುವೆ?

## ಕುಂಚ ಪ್ರಪಂಚ

ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in





**ಶಿಲ್ಪಾ ಪಿ. ಲೋಹಾರ್**
6ನೇ ತರಗತಿ, ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್, ಬೆಳಗಾವಿ



**ಶ್ರೇಯಾ ದಿವಾಕರ್**
5ನೇ ತರಗತಿ, ಪ್ರಮತಿ ಹಿಲ್‌ವಿವ್ ಅಕಾಡೆಮಿ, ಮೈಸೂರು







**ಸನ್ನಿಧಿ ಭಾರದ್ವಾಜ್**
6ನೇ ತರಗತಿ, ದಿ ಆರ್ಕಿಡ್ಸ್ ಪಬ್ಲಿಕ್ ಸ್ಕೂಲ್, ಮೈಸೂರು